

ಭೂಷಣ್. ತನ್ನೊಂದಿಗೆ ಇದ್ದ ಮೂರು ಸಾಕ್ಷಿಗಳಿಂದ ಆರೋಪಿಗೆ ಶಿಕ್ಷೆ ಕೊಡಿಸುವ ವಿಶ್ವಾಸವಿತ್ತು.

"ನಿಮ್ಮ ಹೇಳಿಕೆಗೂ ನಿಜಕ್ಕೂ ಸಂಬಂಧವಿಲ್ಲ ಎಂಬುದು ತಿಳಿದುಬರುತ್ತಿದೆ. ಸರಿಯಾಗಿ ಜ್ಞಾಪಿಸಿಕೊಂಡು ಹೇಳಿ... ಇಲ್ಲದಿದ್ದರೆ ಕೋರ್ಟ್‌ಗೆ ಸುಳ್ಳು ಸಾಕ್ಷ್ಯ ಹೇಳಿದ್ದೀರಿ ಅಂತ ಶಿಕ್ಷೆ ಆಗಬಹುದು."

ರೂಪಾದೇವಿ ಭಯದಿಂದ ಮಾತಾಡದೇ ನಿಂತಳು.

"ಮೈಲಾರ್ಡ್... ಇವರ ಸಾಕ್ಷಿಯನ್ನು ಪರಿಗಣಿಸುವುದಕ್ಕಾಗಿಯೇ... ಆ ವಾಚ್‌ಮನ್ ಸಾಕ್ಷಿಯನ್ನು ಬಿಡಲಾಗಿದೆ. ಹೀಗಾಗಿ ಸದ್ಯಕ್ಕೆ ಇವರ ಹೇಳಿಕೆಯನ್ನು ಪರಿಗಣಿಸಬಾರದಾಗಿ ಕೋರುತ್ತೇನೆ."

ತನ್ನ ಕೋಟೆಯ ಒಂದು ಸುತ್ತು ಬಿದ್ದಿದೆ ಎಂದು ಭೂಷಣ್‌ಗೆ ಅರಿವಾಗಿತ್ತು. ಆದರೆ ಅವನಿಗಿದ್ದ ವಿಶ್ವಾಸ, ಉಳಿದೆರಡು ಸಾಕ್ಷಿಗಳ ಮೇಲೆ... ಅವೆರಡೇ ಕ್ಲಿನ್ಚಿಂಗ್ ಎವಿಡೆನ್ಸ್!

"ದಿಲ್ ಬಾಗ್ ಸಿಂಗ್ ನಿಮಗೆ ವಯಸ್ಸೆಷ್ಟು?"

"ಅರವತ್ತೈದು ವರ್ಷ."

"ಹೇಳಿ ಅವತ್ತು ಏನು ನೋಡಿದಿರಿ?"

"ಸರ್... ನಾನು ಅಂದು ರಾತ್ರಿ ಮನೆಯ ಮುಂದೆ ಕುಳಿತು ಡ್ರಿಂಕ್ಸ್ ಮಾಡುತ್ತಿದ್ದೆ. ಯಾರೋ ಚೀರಿದ ಸದ್ದು ಕೇಳಿತು. ಎದ್ದು ನವೀನ್ ಅವರ ಮನೆಯ ಮುಂದೆ ಹೋಗುವಷ್ಟರಲ್ಲಿ ಆ ಹುಡುಗಿಯ ಹೆಣ ನೆಲದ ಮೇಲೆ ಬಿದ್ದಿತ್ತು. ನವೀನ್ ಮನೆಯ ಬಾಗಿಲು ನಾನು ನೋಡುತ್ತಿರುವಂತೆಯೇ ಮುಚ್ಚಿಕೊಂಡಿತು."

"ಆಮೇಲೆ?"

ಆ ಪ್ರಶ್ನೆಯನ್ನು ಅವನು ನಿರೀಕ್ಷಿಸಿರಲಿಲ್ಲ!... ಹೋದವರು ಹೇಗಿದ್ದರು, ಅವರ ಎತ್ತರ ಎಷ್ಟು ಇತ್ಯಾದಿ ಕೇಳುತ್ತಾರೆ ಎಂದು ಅವನಿಗೆ ಹೇಳಿಕೊಡಲಾಗಿತ್ತು.

"ಆಮೇಲೆ ಎದುರು ಮನೆಯ ರವಿ ಬಂದರು... ನಾವಿಬ್ಬರೂ ನಿಧಾನವಾಗಿ ಆ ಹುಡುಗಿಯ ಶವದ ಬಳಿ ಹೋಗಿ ಚೆಕ್ ಮಾಡಿದಾಗ ಆ ಹುಡುಗಿ ಸತ್ತು ಹೋಗಿದ್ದಳು."

"ಅಂದರೆ ನೀವು ಮನೆಯಿಂದ ಎದ್ದು ಹೊರಟು ನವೀನ್ ಅವರ ಮನೆಯ ಮುಂದೆ ಹೋಗುವಷ್ಟರಲ್ಲಿ ನವೀನ್ ಆ ಹುಡುಗಿಗೆ ಚಾಕು ಹಾಕಿ ಒಳಗಡೆ ಹೋಗಿದ್ದ... ನೀವು ನವೀನ್‌ರನ್ನು ನೋಡಲಿಲ್ಲ... ಸರಿಯಾ?"

ಭೂಷಣ್ ಕೊಂಚ ಬೆದರಿದ. ದಿಲ್ ಬಾಗ್ ಸಿಂಗ್ ವಯಸ್ಸಾದವ... ಅಂದು ಕುಡಿದಿದ್ದ ಬೇರೆ. ಅವನ ಹೇಳಿಕೆಯಲ್ಲಿ ಕೊಂಚ ಅತ್ತಿತ್ತ ಆದರೂ ಶ್ರೀರಂಗಾಚಾರ್... ಕಾನೂನಿನ ಮೂಲೆ ಮೂಲೆಯಲ್ಲೆಲ್ಲಾ ಹುಡುಕಿ, ಯಾವುದೋ ಹಳೆಯ ಕೇಸ್‌ಗಳ ರೆಫರೆನ್ಸ್ ತೆಗೆದು... ಅವರ ಸಾಕ್ಷಿಯನ್ನೂ ಪರಿಗಣಿಸದಿರುವಂತೆ ಮಾಡುತ್ತಾರೆ ಎನ್ನುವ ಭಯ ಕಾಡಿತು. ಅದಕ್ಕೆ ವ್ಯತಿರಿಕ್ತವಾಗಿ ಶ್ರೀರಂಗಾಚಾರ್,

"ಇದು ತುಂಬಾ ಇಂಪಾರ್ಟೆಂಟ್ ಪಾಯಿಂಟ್ ಯುವರ್ ಆನರ್."

"ದಿಲ್ ಬಾಗ್ ಸಿಂಗ್ ಅವರು ನವೀನ್ ಅವರ ಮನೆಯ ಮುಂದೆ ಬರುವಷ್ಟರಲ್ಲಿ ಅನುಪಮಾ ಅವರ ಹೆಣ ಕೆಳಗಡೆ ಬಿದ್ದಿತ್ತು."

"ಹೌದು... ನನಗೆ ಚೆನ್ನಾಗಿ ನೆನಪಿದೆ."

"ನಿಮ್ಮ ಹೇಳಿಕೆಯನ್ನೇ ನಂಬುವುದಾದರೆ ನಿಮ್ಮ ಮನೆಯಿಂದ ಎದ್ದು ನವೀನ್ ಮನೆಯ ಮುಂದೆ ಬಂದು ನಿಲ್ಲುವಷ್ಟರಲ್ಲಿ ನಿಮಗೆ ಸುಮಾರು ಮೂವತ್ತು ಸೆಕೆಂಡ್‌ಗಳು ಹಿಡಿದವು... ಕರೆಕ್ಟ್..."

"ಹೌದು... ನಾನು ವಯಸ್ಸಾದವ ನೋಡಿ, ತಕ್ಷಣ ಕುರ್ಚಿಯಿಂದ ಎದ್ದು ಬರುವುದಕ್ಕೆ ಕಷ್ಟ."